<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 04-07-2022.**</u>

**ಮುಂದುವರೆದ ಪಾಟೀ ಸವಾಲು - ಶ್ರೀ. ಎ.ಆರ್.ಎಸ್.ಆರ್., ವಕೀಲರಿಂದ**

(ವಾದಿ ಪರ ವಕೀಲರು ಕಳೆದ ದಿನಾಂಕದ ಪಾಟೀ ಸವಾಲಿನ ಕೊನೆಯ ಎರಡು ಸಾಲುಗಳಲ್ಲಿ **ನನ್ನ ಪ್ರಕಾರ ಯಾವುದೇ** ಎಂಬ ಪದಗಳ ನಂತರ ಬೆರಳಚು ತಪ್ಪಾಗಿ ಅಲ್ಲಿ ಯಾವುದೇ ಪದ ಟೈಪ್ ಆಗಿರುವುದಿಲ್ಲವಾದ್ದರಿಂದ ವಾದಿ ಮತ್ತು ಪ್ರತಿವಾದಿ ಪರ ವಕೀಲರ ಸಮ್ಮತಿ ಮೇರೆಗೆ **ನನ್ನ ಪ್ರಕಾರ ಯಾವುದೇ** ಎಂಬ ಪದಗಳ ನಂತರ **ರೆಸಲ್ಯೂಷನ್** ಎಂಬ ಪದವನ್ನು ನ್ಯಾಯಾಲಯ ಸೇರಿಸಿರುತ್ತದೆ).

6) ನನ್ನ ಪ್ರಕಾರ ರೆಸಲ್ಯೂಷನ್ ಮಾಡಿ ನನಗೆ ಸಾಕ್ಷಿ ಹೇಳಲು ಅಧಿಕಾರ ಕೊಡುವ ಬಗ್ಗೆ 3 ನೇ ಪ್ರತಿವಾದಿ ಸಂಸ್ಥೆಗೆ ಅಧಿಕಾರವಿದೆಯೇ? ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು 2018 ರಿಂದಲೂ ಯಾವುದೇ ಉದ್ಯೋಗ ಮಾಡುತ್ತಿಲ್ಲ. ನಾನು 3 ನೇ ಪ್ರತಿವಾದಿ ಸಂಸ್ಥೆಯಲ್ಲಿ ಪಾಲುದಾರ ಅಥವಾ ಬೇರೆ ಹುದ್ದೆಯಲ್ಲಿ ಉದ್ಯೋಗ ಮಾಡಿಲ್ಲ. ಆದ್ದರಿಂದ ನನಗೆ 3 ನೇಪ್ರತಿವಾದಿ ಸಂಸ್ಥೆ ನೋಂದಣೆಯಾಗಿದೆಯೇ ಮತ್ತು ನೋಂದಣೆ ನವೀಕರಣವಾಗಿದೆಯೇ ಎಂಬ ಬಗ್ಗೆ ಗೊತ್ತಿಲ್ಲವೆಂದರೆ ಹೌದು, ನಾನು ಹೇಳುತ್ತೇನೆ, ಅದು ಡೀಮಡ್ ಯೂನಿವರ್ಸಿಟಿ. ಡೀಮಡ್ ಯೂನಿವರ್ಸಿಟಿ ಕೂಡ ನೋಂದಣೆಯಾಗಬೇಕು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಆಡಳಿತ ವ್ಯವಹಾರಗಳನ್ನು ಯಾರು ನೋಡಿಕೊಳ್ಳುತ್ತಾರೆಂದು ನನಗೆ ಗೊತ್ತಿಲ್ಲ. **ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರು ವಾದಿ ಪರ ವಕೀಲರು 3 ನೇ ಪ್ರತಿವಾದಿ ಸಂಸ್ಥೆಯ ಆಡಳಿತ ವ್ಯವಹಾರಗಳ ಬಗ್ಗೆ ಸಾಕ್ಷಿಗೆ ಪ್ರಶ್ನೆಗಳು ಸಮಂಜಸವಲ್ಲವೆಂದು ಆಕ್ಷೇಪಣೆ ಮಾಡಿದ್ದು, ವಾದಿ ಪರ ವಕೀಲರು ಒಂದು ಮೆಮೋದೊಂದಿಗೆ ಮಾನ್ಯ ಉಚ್ಛ ನ್ಯಾಯಾಲಯದ ದಿ.26-05-2022 ರ**

ಸುತ್ತೋಲೆ ಹಾಜರು ಮಾಡಿದ್ದು **3** ನೇ ಪ್ರತಿವಾದಿ ಗೆಜೆಟ್ ನೋಟಿಫಿಕೇಶನ್ ಹಾಜರು ಮಾಡಿದ್ದರಿಂದ ಆದರ ಕುರಿತು ವಾದ ಕೇಳಲು ಪಾಟೀ ಸವಾಲು ಮುಂದೂಡಿದೆ**).**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**